**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ, ಮಳವಳ್ಳಿ.</u>**

**<u>ಸಿಸಿ ನಂಃ 49/2022</u>**

| | | |
|---|---|---|
| ಹೆಸರು | ರವಿಕುಮಾರ್ ಡಿ | ಸಿ.ಡಬ್ಲ್ಯೂ 24 |
| ತಂದೆಯ ಹೆಸರು | ದೊಡ್ಡಕಲ್ಲು ವೀರಪ್ಪ | ಪಿ.ಡಬ್ಲ್ಯೂ 8 |
| ವಯಸ್ಸು | 37 ವರ್ಷ | |
| ಉದ್ಯೋಗ | ಪಿ ಎಸ್ ಐ ಕಿರುಗಾವಲು ಪೊಲೀಸ್ ಠಾಣೆ | |
| ವಾಸ ಸ್ಥಳ | ಕಿರುಗಾವಲು | |

ಸಾಕ್ಷಿಗೆ ದಿನಾಂಕಃ **25.11.2025** ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಎ ಪಿ ಪಿ ರವರಿಂದ .</u>**

ದಿನಾಂಕ 04.11.2020 ರಿಂದ 06.11.2021 ರವರೆಗೆ ನಾನು ಮಳವಳ್ಳಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪಿಎಸ್.ಐ. ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2) ದಿನಾಂಕ 17.10.2021 ರಂದು ನಾನು ಠಾಣಾ ಪ್ರಭಾರೆಯಲ್ಲಿ ಇದ್ದಾಗ ಬೆಳಿಗ್ಗೆ 10.00 ರ ಸಮಯದಲ್ಲಿ ಚಾಸಾ 1ರ ವರು ಠಾಣೆಗೆ ಹಾಜರಾಗಿ ನೀಡಿದ ನಿಪಿ 2 ಲಿಖಿತ ದೂರನ್ನು ಸ್ವೀಕರಿಸಿ, ಠಾಣಾ ಗುನ್ನೇ ಸಂಖ್ಯೆ 184/2021 ರಂತೆ ಪ್ರಕರಣ ದಾಖಲು ಮಾಡಿ ಪ್ರ.ವ. ವರದಿಯನ್ನು ತಯಾರು ಮಾಡಿರುತ್ತೇನೆ. ನಿಪಿ 2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ 2 ಬಿ ಎಂಧು, ಪ್ರ. ವ. ವರದಿಯನ್ನು ನಿಪಿ 8 ಎಂದು, ಸಾಕ್ಷಿಯ ಸಹಿಯನ್ನು ನಿಪಿ 8 ಎ ಎಂದು ಗುರುತಿಸಲಾಯಿತು. ಅದೇ ದಿನ ಘಟನಾ ಸ್ಥಳಕ್ಕೆ ಭೇಟಿ ನೀಡಿ, ಚಾಸಾ 2 ರವರು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ನಿಪಿ 3 ರಂತೆ ಸಂಜೆ 4.15 ರಿಂದ 5.00 ರ ಸಮಯದಲ್ಲಿ ಪಂಚನಾಮೆ ಜರುಗಿಸಿರುತ್ತೇನೆ. ಸಾಕ್ಷಿಯ ಸಹಿಯನ್ನು ನಿಪಿ 3ಡಿ ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಕಾಲಕ್ಕೆ ಕಚ್ಚಾ ನಕಾಶೆಯನ್ನು ಬರೆದಿರುತ್ತೇನೆ. ಮುಂದಿನ ತನಿಖೆಯನ್ನು ಚಾಸಾ 25 ರವರಿಗೆ ವಹಿಸಿರುತ್ತೇನೆ.

**<u>ವಾಟೀ ಸವಾಲುಃ ಆರೋಪಿತರ ಪರ ಃ ಶ್ರೀ ವಕೀಲರಿಂದಃ</u>**

ಚಾಸಾ-1 ರವರು ನೀಡಿದ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಘಟನಾ ಸ್ಥಳಕ್ಕೆ ಬೇಟಿ ನೀಡಿರುವುದಿಲ್ಲ ಮತ್ತು ನಿಪಿ-3 ನ್ನು ಠಾಣೆಯಲ್ಲಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.